ತಾಲ್ಲೂಕಿನಲ್ಲಿ ಎರಡು ಸಾವಿರ ಶೌಚಾಲಯಗಳನ್ನು ಕಟ್ಟಬೇಕಾಗಿತ್ತು ಆದರೆ ಅದರಲ್ಲಿ 985 ಮಾತ್ರ ಕಟ್ಟಿದ್ದಾರೆ. ಅವರಲ್ಲಿ ಹಣ ಪಾವತಿ 454ಕ್ಕೆ ಮಾತ್ರ ಮಾಡಿದ್ದಾರೆ. ಅಷ್ಟೊಂದು ವಿಳಂಬ ಮಾಡಿದ್ದಾರೆ ಮತ್ತು ಶೌಚಾಲಯಗಳನ್ನು ಕಟ್ಟತಕ್ಕಂಥ ಪರಿಸ್ಥಿತಿಯಲ್ಲಿ ಸರಿಯಾಗಿ ಕಟ್ಟದೆ ಬಹಳಷ್ಟು ದುರುಪಯೋಗವಾಗಿದೆ. ಕಾರಣ ಏನು ಎಂದು ತಿಳಿದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಮನೆಗಳ ವಿಚಾರದಲ್ಲಿಯೂ ಕೂಡ ಇಂದಿರಾ ಆವಾಸ್ ಯೋಜನೆಯಲ್ಲಿ ಗುತ್ತಿಗೆಯನ್ನು ಸ್ಥಳೀಕವಾಗಿ ಕೊಟ್ಟಿಲ್ಲ. ಉತ್ತರ ಪ್ರದೇಶದಿಂದ ಬಂದಿರತಕ್ಕಂಥ ಈಜಿಪ್ಟ್ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ 2-3 ಗ್ರಾಮಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಅದನ್ನೂ ಕೂಡ ತಾವು ಗಮನದಲ್ಲಿ ಇಟ್ಟುಕೊಂಡು ಆ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ತಾವು ನಿರ್ಮಲ ಕರ್ನಾಟಕ ವಿಚಾರದಲ್ಲಿ ಹೇಳಿದ್ದೀರಿ. ಕಳೆದ 10 ವರ್ಷದಲ್ಲಿ ಒಂದು ಲಕ್ಷದ 7 ಸಾವಿರ ಶೌಚಾಲಯಗಳನ್ನು ಕಟ್ಟಿದಂತೆ ನಮ್ಮ ವರದಿಯಲ್ಲಿದೆ. ಆದರೆ ಒಂದೇ ವರ್ಷದಲ್ಲಿ 1995ರ ಅಕ್ಟೋಬರ್ ಎರಡರಿಂದ 96ರ ಅಕ್ಟೋಬರ್ ಎರಡರವರೆಗೆ 2 ಲಕ್ಷ 50 ಸಾವಿರ ಕೌಟುಂಬಿಕ ಶೌಚಾಲಯಗಳನ್ನು ನಾವು ಕಟ್ಟಿದ್ದೇವೆ. ಒಂದು ದೊಡ್ಡ ತರಹವಾದ ಪ್ರಗತಿ ಆಗಿದೆ. ಆದರೆ ನಾವು ನಿರ್ಧಾರಪಡಿಸಿದಂತಹ 5 ಲಕ್ಷ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ತಾವು ಹೇಳಿದಂತೆ 2 ಸಾವಿರ ಶೌಚಾಲಯಗಳನ್ನು ಕಟ್ಟಬೇಕೆನ್ನುವ ಗುರಿಯಲ್ಲಿ 800 ನಾವು ಕಟ್ಟಿದ್ದೇವೆ. ಅಲ್ಲಿನ ಜನಗಳಲ್ಲಿ ಜಾಗ್ರತೆಯನ್ನು ಮೂಡಿಸಬೇಕಾದಂತಹ ಒಂದು ಅಗತ್ಯತೆ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಮಲೆನಾಡಿನ ಪ್ರದೇಶದಲ್ಲಿ ಚಿಕ್ಕಮಗಳೂರಿನಲ್ಲಿ ಮತ್ತು ಶಿವಮೊಗ್ಗದಲ್ಲಿ ಹೆಚ್ಚು ಹಣವನ್ನು ಅವರು ಕೇಳುತ್ತಿದ್ದಾರೆ. ಅದರ ಅಗತ್ಯಗಳು ಕಡಿಮೆ. ಆದರೆ ಉತ್ತರ ಕರ್ನಾಟಕದ ಭಾಗದಲ್ಲಿ ಶೌಚಾಲಯಗಳ ಅಗತ್ಯ ಇರತಕ್ಕಂಥಾದ್ದರಲ್ಲಿ ಜನರು ಅದರ ಅಗತ್ಯಗಳನ್ನು ಮನಗಂಡಿಲ್ಲ. ಅದಕ್ಕಾಗಿ ನಾವು ಅವರಿಗೆ ಹೆಚ್ಚಿನ ಪ್ರೇರಣೆ ನೀಡಬೇಕಾಗುತ್ತದೆ. ಅವರ ಕ್ಷೇತ್ರದಲ್ಲಿ 800ಕ್ಕೆ ಮಾತ್ರ ಸೀಮಿತವಾಗಿದೆ. ಅದರಲ್ಲಿ ನಾವು 425ಕ್ಕೆ ಮಾತ್ರ ಹಣ ಕೊಟ್ಟಿದ್ದೇವೆ. ಉಳಿದಿರತಕ್ಕಂಥಾದ್ದು ವಿವಿಧ ಹಂತಗಳಲ್ಲಿ ಇದೆ. ತಾವು ಹೇಳಿದ ಹಾಗೆ ಎನಾದರೂ ಕಳಪೆ ಕಾಮಗಾರಿಗಳು ಆಗಿದ್ದರೆ ನಾನು ಕ್ರಮ ಕೈಗೊಳ್ಳುತ್ತೇನೆ. ತಾವು ನಿರ್ದಿಷ್ಟಪಡಿಸಿದರೆ ಇವತ್ತೇ ನಾನು ಸಿ.ಇ.ಒ ಅವರಿಗೆ ತನಿಖೆ ಮಾಡಲು ಆದೇಶ ಕೊಡುತ್ತೇನೆ.

ವಿಷಯ:- ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ನೇತ್ರಾವತಿ ನದಿಯಿಂದ ನೀರನ್ನು ಒದಗಿಸುವ ಯೋಜನೆ.

9(307)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ನೇತ್ರಾವತಿ ನದಿಯಿಂದ ನೀರನ್ನು ಒದಗಿಸುವ ಯೋಜನೆಯ ಅಂದಾಜು ವೆಚ್ಚ ಎಷ್ಟು;

ಆ) ಹಾಗಿದ್ದಲ್ಲಿ ಕಳೆದ ಸಾಲಿನ ಅಯವ್ಯಯದಲ್ಲಿ ಈ ಯೋಜನೆಗೆ ನಿಗದಿಪಡಿಸಿದ ಹಣವೆಷ್ಟು;

ಇ) ಈ ಯೋಜನೆಯನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ದಿ ಸಚಿವರು):-

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರದ 14 ಗ್ರಾಮಗಳಿಗೆ ನೇತ್ರಾವತಿ ನದಿಯಿಂದ ನೀರು ಸರಬರಾಜು ಮಾಡಲು ರೂ. 22.00 ಕೋಟಿ ಮೊತ್ತದ ಅಂದಾಜುಪಟ್ಟಿ ತಯಾರಿಸಲಾಗಿತ್ತು. ಮುಂದುವರೆದು, ತಾಂತ್ರಿಕವಾಗಿ ಪರಿಶೀಲಿಸಲಾಗಿ ಯೋಜನೆಯ ಮೊತ್ತವನ್ನು ಸಾಕಷ್ಟು ಕಡಿಮೆ ಮಾಡುವ ಸಾಧ್ಯತೆ ಕಂಡುಬಂದಿದ್ದು, ಈಗ ಅಂದಾಜುಪಟ್ಟಿಯನ್ನು ರೂ. 10.00 ಕೋಟಿಗಳಿಗೆ ಮಾರ್ಪಾಡುಗೊಳಿಸಲಾಗುತ್ತದೆ.

ಆ) ಈ ಯೋಜನೆಗಾಗಿ ಕಳೆದ ಸಾಲಿನಲ್ಲಿ ಯಾವುದೇ ಹಣ ನಿಗದಿಪಡಿಸಿರುವುದಿಲ್ಲ. ಆದರೆ ಯೋಜನಾವರದಿ ಸಲ್ಲಿಸಲು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನಿಂದ ರೂ. 70 ಸಾವಿರ ಅನುದಾನ ನೀಡಲಾಗಿದೆ.

ಇ) ಯೋಜನೆಯ ಅಂತಿಮ ರೂಪರೇಷೆಗಳನ್ನು ಪರಿಶೀಲಿಸಿ, ಅನುದಾನ ಲಭ್ಯತೆಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಸಲುವಾಗಿ ನಾನು ಕಳೆದ ವರ್ಷದಿಂದ ಕೇಳುತ್ತಿದ್ದೇನೆ. 31 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೇವೆಂದು ಹೇಳಿದ್ದರು. ಆಮೇಲೆ 22 ಕೋಟಿ ರೂಪಾಯಿಗಳ ಅಂದಾಜು ಮತ್ತು ಎಸ್ಟಿಮೇಟ್ ಮಾಡಿದ್ದೇವೆಂದು ಹೇಳಿದರು. ಪುನಃ ಅದನ್ನು 10 ಕೋಟಿ ರೂಪಾಯಿಗಳಿಗೆ ಮಾಡಿದ್ದೇವೆಂದು ಈಗ ಉತ್ತರ ಕೊಡುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ ಯಾವ ವರ್ಷದ ಬಜೆಟ್‌ನಲ್ಲಿ ಇದನ್ನು ಸೇರಿಸಿಕೊಳ್ಳುತ್ತಿದ್ದೀರಿ. ಇದಕ್ಕೆ ಒಂದು ಕಾಲ ನಿಗದಿತ ಕಾರ್ಯಕ್ರಮ ಹಾಕುತ್ತೀರೋ? ಯಾವಾಗ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಮುಗಿಸುತ್ತೀರಿ? ಇದರ ಬಗ್ಗೆ ನಿರ್ದಿಷ್ಟವಾದ ಉತ್ತರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ ಹರಿದು ಹೋಗುವಂತಹ ನದಿಯ ಮೂಲಕವಾಗಿ ಸಮುಚ್ಚಯದ ಗ್ರಾಮಗಳಿಗೆ ನೀರನ್ನು ಕೊಡುವಂತಹದ್ದು ಆದರೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಉಪ್ಪು ನೀರು ಇರುವಂತಹ ಪ್ರದೇಶದಲ್ಲಿ ಇದು ಅನುಕೂಲವಾಗುತ್ತದೆ ಎನ್ನುವುದನ್ನು ಮನಗಂಡು ಸುಮಾರು 70 ಸಾವಿರ ರೂಪಾಯಿಗಳನ್ನು ಜಿಲ್ಲಾ ಪಂಚಾಯತ್‌ಗೆ ಈ ತರಹಸರ್ವೆ ಮಾಡಲಿಕ್ಕೆ ಕೊಟ್ಟು ತಯಾರು ಮಾಡಿದ್ದೇವೆ. ಸುಮಾರು 22

ಕೋಟಿ ರೂಪಾಯಿಗಳ ಯೋಜನೆಯನ್ನು ಮೊದಲು ತಯಾರಿಸಿದರು. ಇದು ಬಹಳ ಹೆಚ್ಚಿನ ಹಣ ಆಗುತ್ತದೆ ಎನ್ನುವಂತಹ ಕಾರಣಕ್ಕಾಗಿ ನಮ್ಮ ಇಂಜಿನೀಯರ್ ಇನ್ ಚೀಫ್ ಅವರು ಜನವರಿ ತಿಂಗಳಲ್ಲಿ ಅಲ್ಲಿಗೆ ಹೋಗಿ ಭೇಟಿಯಾಗಿ ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಸೂಚಿಸಿ ಇಡೀ ಯೋಜನೆಯ ವೆಚ್ಚವನ್ನು 10 ಕೋಟಿ ರೂಪಾಯಿಗಳಿಗೆ ಇಳಿಸುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ತಿಳಿಸಿದ್ದರಿಂದ ಇದನ್ನು ನಾವು ರಾಜೀವ್ ಗಾಂಧಿ ಟೆಕ್ನಾಲಜಿಕಲ್ ಮೆಷಿನ್ ಡೆಲ್ಲಿಗೆ ಕಳುಹಿಸಿ ಈ 1997-98ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ಎಷ್ಟು ವರ್ಷ ಆಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ರಾಜೀವ್ ಗಾಂಧಿ ಟೆಕ್ನಾಲಜಿಕಲ್ ಮೆಷಿನ್ ಡೆಲ್ಲಿ, ಇಲ್ಲಿಂದ ಅವರ ಒಪ್ಪಿಗೆಯನ್ನು ಪಡೆದು ಬರುವ ವರ್ಷ 1997-98ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಇದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ:- ನನ್ನ ಸಮಸ್ಯೆ ಏನೆಂದರೆ ನನ್ನ ಕ್ಷೇತ್ರದ ಬದಿಯಲ್ಲಿ ಅರಬ್ಬಿ ಸಮುದ್ರ ಉಂಟು. ಕೊಳವೆಬಾವಿ ತೆಗೆದ ತಕ್ಷಣ ಉಪ್ಪು ನೀರು ಬರುತ್ತಾ ಉಂಟು. ಸುಮಾರು 200-300 ಅಡಿ ಕೊಳವೆಬಾವಿ ಕೊರೆದರೂ ಸಹ ನೀರು ಸಿಗುತ್ತಿಲ್ಲ. ಕಳೆದ 15 ವರ್ಷಗಳಿಂದ 278 ಕೊಳವೆಬಾವಿಗಳನ್ನು ತೋಡಿದ್ದಾರೆ. ಅದರಲ್ಲಿ ಸುಮಾರು 60 ಪರ್ಸೆಂಟ್ ಕೊಳವೆಬಾವಿಗಳಲ್ಲಿ ನೀರು ಸಿಗುತ್ತಿಲ್ಲ.

ಅಧ್ಯಕ್ಷರು:- ತಾವು ನಿರ್ದಿಷ್ಟವಾದ ಉತ್ತರ ಬೇಕು ಎಂದು ಕೇಳಿದಿರಿ. ಮಾನ್ಯ ಮಂತ್ರಿಗಳು 1997-98ನೇ ಸಾಲಿನ ಒಳಗಾಗಿಯೆ ಇದಕ್ಕೆ ಅನುಮತಿ ದೊರಕಿಸಿಕೊಟ್ಟು ಕೆಲಸ ಪ್ರಾರಂಭ ಮಾಡುತ್ತೇನೆಂದು ಹೇಳಿದರು. ಮತ್ತೆ ತಾವು ಕಷ್ಟ ಏಕೆ ತೋಡಿಕೊಳ್ಳುತ್ತೀರಿ? ನಿಮಗೆ ನಿರ್ದಿಷ್ಟವಾದ ಉತ್ತರ ಸಿಕ್ಕಿತಲ್ಲಾ.

ಶ್ರೀ ಕೆ. ಜಯರಾಮಶೆಟ್ಟಿ:- ಯಾವಾಗ ಮುಗಿಸುತ್ತೀರಿ?

ಅಧ್ಯಕ್ಷರು:- ಇನ್ನೂ ಶುರು ಮಾಡಿಲ್ಲ. ಮುಗಿಸುವುದು ಯಾವಾಗ ಎಂದು ಕೇಳಿದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ನಮ್ಮ ಕಡೆಗೆ ಒಂದು ಗಾದೆ ಮಾತು ಇದೆ. ಕೂಸು ಹುಟ್ಟುವುದಕ್ಕಿಂತ ಮುಂಚಿತವಾಗಿ ಕುಲಾವಿ ಹೊಲಿಸಿದರು ಎಂದು. ನಾವು ಈ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ. ಕೇಂದ್ರ ಸರ್ಕಾರದಿಂದ ಒಪ್ಪಿಗೆ ಬಂದ ತಕ್ಷಣ ನಾವು ಪ್ರಾರಂಭ ಮಾಡುತ್ತೇವೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕರಾವಳಿ ಪ್ರದೇಶದಲ್ಲಿ ಉಪ್ಪು ನೀರಿನ ಮತ್ತು ಬೇರೆ ತರಹದ ತೊಂದರೆಗಳು ಇದೆ ಎಂದು ಹೇಳಿ, ರಾಜೀವ್ ಗಾಂಧಿ ಟೆಕ್ನಾಲಜಿಕಲ್ ಮೆಷಿನ್ ಒಪ್ಪಿಗೆ ಪಡೆದು ನಾವು ಕೆಲಸವನ್ನು ಮಾಡುತ್ತೇವೆ.